R.A.No.59/2011
R.W.2.

**ಸಾಕ್ಷಿಯನ್ನು ದಿಃ 13.03.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ ಜಿ ಕೆ ಎಂ ವಕೀಲರಿಂದ**

ಪ್ರಸ್ತುತ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ವೆಂಕಪ್ಪ ಹಣಮಪ್ಪ ತುಂಗಳ ರವರು ಕರೆದಿದ್ದಾರೆ. ಮುಧೋಳ ನ್ಯಾಯಾಲಯದಲ್ಲಿಯೂ ಸಹ ನಾನೇ ಸಾಕ್ಷಿ ನುಡಿದಿದ್ದೇನೆ. ಮುಧೋಳದಲ್ಲಿಯೂ ಸಹ ವೆಂಕಪ್ಪ ಹಣಮಪ್ಪ ತುಂಗಳ ರವರೇ ನನಗೆ ಸಾಕ್ಷಿ ನುಡಿಯಲು ಕರೆಸಿದ್ದರು. ವೆಂಕಪ್ಪ ಹಣಮಪ್ಪ ತುಂಗಳ ಆಗ ಅಜ್ಞಾನಿಯಾಗಿದ್ದ ಅಂದರೆ ಸರಿಯಲ್ಲ. ಮೃತ್ಯುಪತ್ರದ ಬಗ್ಗೆ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. 09.03.2013 ರಂದು ಮುಧೋಳದಲ್ಲಿನ ಹಳ್ಳದ ಬಿಲ್ಡಿಂಗನಲ್ಲಿ ಮೃತ್ಯಪತ್ರ ಆಗಿದೆ. ಅಲ್ಲಿ ವೆಂಕಪ್ಪ ಹಣಮಪ್ಪ ತುಂಗಳ ಇದ್ದರು. ವೆಂಕಪ್ಪ ರವರು ಹಣಮಂತ ವೆಂಕಪ್ಪ ತುಂಗಳ ರವರ ಹೆಸರಿಗೆ ಮೃತ್ಯುಪತ್ರ ಬರೆದರು. ನಾನು ಮೃತ್ಯುಪತ್ರದಲ್ಲಿ ಹಳ್ಳದ ರವರ ಬಿಲ್ಡಿಂಗನಲ್ಲಿ ಮೃತ್ಯುಪತ್ರ ಆಗಿದೆ ಎಂದು ಬರೆದಿಲ್ಲ.

2. ಮೃತ್ಯುಪತ್ರ ಬರೆಯುವಾಗ ಭಾಗೀರಥಿ ತುಂಗಳ, ಎಸ್ ಎಂ ಘಾಟಗೆ, ನಾನು, ವೆಂಕಪ್ಪ ಯಾದವಾಡ, ಅಶೋಕ ಕೋಣಪ್ಪನ್ನವರ ಸಹ ಇದ್ದರು. ಇವರನ್ನು ಹೊರತುಪಡಿಸಿ, ಸ್ಥಳದಲ್ಲಿ ವೆಂಕಪ್ಪ ತುಂಗಳ, ಅವರ ಚಿಕ್ಕಮ್ಮ ಭಾಗೀರಥಿ ಇದ್ದರು. ಭಾಗೀರಥಿ ರವರ ಅಕ್ಕ ಸಹ ಅಲ್ಲಿ ಇದ್ದರು.

3. ಮೃತ್ಯುಪತ್ರ ಬರೆದವರಿಗೆ ಮೃತ್ಯುಪತ್ರ ಬರೆಸಿಕೊಂಡವನು ಮೊಮ್ಮಗನಾಗಬೇಕು. ನಾವು ಎಲ್ಲರೂ ಕೂಡಿ ಒಮ್ಮೆಲೇ ವಿಲ್ ಬರೆದ ಸ್ಥಳಕ್ಕೆ ಹೋಗಿಲ್ಲ, ಆದರೆ ಅವರು ನನ್ನನ್ನು ಕರೆಸಿರುತ್ತಾರೆ. ಮೃತ್ಯುಪತ್ರವನ್ನು ಕೈಬರವಣಿಗೆಯಲ್ಲಿ ಎಸ್.ಟಿ.ಬುದ್ನಿ ವಕೀಲರು ಬರೆದರು. ಭಾಗಿರಥಿರವರು ಮೃತ್ಯುಪತ್ರ ಬರೆಯಲು ಹೇಳಿದರು. ಬರೆದ ಮೇಲೆ ಓದಿ ಹೇಳಿದ ನಂತರ ಭಾಗೀರಥಿರವರು ಸರಿಯಿದೆ ಎಂದು ಹೇಳಿದರು, ನಂತರ ಮೃತ್ಯುಪತ್ರವನ್ನು ಟೈಪ್ ಮಾಡಲು ಹೇಳಿದರು. ಮೃತ್ಯುಪತ್ರವನ್ನು ಮನೆಯಲ್ಲಿ ಟೈಪ್ ಮಾಡಿಲ್ಲ.

4. ಬಿಜಾಪೂರ ತಾಲೂಕಿನ ಬಬಲಾದಿ ಗ್ರಾಮದ ಸ.ನಂ.19 ರಲ್ಲಿನ ತನ್ನ ಹಿಸ್ಸಾದ ಜಮೀನನ್ನು ಮೃತ್ಯುಪತ್ರದಲ್ಲಿ ಬರೆದಿದ್ದಾರೆ ಹಾಗೂ ಬಿದರಿ ಗ್ರಾಮದ ಎರಡು ಮನೆಗಳು ಸಹ ವಿಲ್ ಬರೆದಿದ್ದಾರೆ. ಬಿದರಿ ಗ್ರಾಮದ ಮನೆ ಪಂಚಾಯಿತಿ ಡೋರ್ ನಂ.51/1, 52/2 ಆಗಿರುತ್ತದೆ. ಹಣಕಾಸಿನ ವ್ಯವಹಾರದ ಬಗ್ಗೆ ಇದ್ದ ದಾವೆಯನ್ನು, ಒಂದೊಮ್ಮೆ ಭಾಗೀರಥಿ ತೀರಿಕೊಂಡರೆ, ದಾವೆಯನ್ನು ನಡೆಸಲು ಮೃತ್ಯುಪತ್ರದಲ್ಲಿ ಅಧಿಕಾರಿ ಕೊಟ್ಟಿದ್ದಾರೆ, ಆದರೆ ನನಗೆ ದಾವೆಯ ಸಂಖ್ಯೆ ನೆನಪಿಲ್ಲ. ವಿಲ್‌ನಲ್ಲಿ ಮನೆಗಳ ಬಗ್ಗೆ,ಜಮೀನಿನ ಬಗ್ಗೆ ಹಾಗೂ ಹಣಕಾಸಿನ ದಾವೆಯ ಬಗ್ಗೆ ಹೊರತುಪಡಿಸಿ ಬೇರೆ ಏನೂ ಹೇಳಿಲ್ಲ.

5. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಇದ್ದ ಬಗ್ಗೆ ನನಗೆ ಹೇಳಿಲ್ಲ. ವಿಲ್ ಓದಿ ಹೇಳುವಾಗ ನಾನು, ಎಸ್ ಎಂ ಘಾಟಗೆ, ವೆಂಕಪ್ಪ ಯಾದವಾಡ, ಅಶೋಕ ಕೋಣಪ್ಪನವರ, ವೆಂಕಪ್ಪ ತುಂಗಳ ಇದ್ದರು. ಇವರನ್ನು ಹೊರತುಪಡಿಸಿ ಮತ್ಯಾರು ಇರಲಿಲ್ಲ. ಮೃತ್ಯಪತ್ರ ಬರೆದುಕೊಟ್ಟವರ ಆಧಾರಕಾರ್ಡ ಸಂಖ್ಯೆ ಮೃತ್ಯುಪತ್ರದಲ್ಲಿ ಬರೆದಿಲ್ಲ.

6. ಭಾಗೀರಥಿ ರವರು ಸಹಿ ಮಾಡುತ್ತಿದ್ದರು. ನ್ಯಾಯಾಲಯದ ಎಲ್ಲಾ ಪ್ರಕರಣಗಳಲ್ಲಿ ಭಾಗೀರಥಿರವರು ಸಹಿ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಯರ ಹಕ್ಕನ್ನು ಲಪಟಾಯಿಸಲು ಸದರಿ ನಿ.ಆರ್.1-ಮೃತ್ಯುಪತ್ರವನ್ನು ಖೊಟ್ಟಿಯಾಗಿ ತಯಾರಿಸಿದ್ದೇವೆ ಅಂದರೆ ಸರಿಯಲ್ಲ. ನಿ.ಆರ್.1 ರಲ್ಲಿರುವ ಹೆಬ್ಬೆಟ್ಟಿನ ಗುರುತು ಭಾಗೀರಥಿಯವರದು ಅಲ್ಲ ಅಂದರೆ ಸರಿಯಲ್ಲ. ಆಧಾರಕಾರ್ಡಿನಲ್ಲಿರುವ ಸಹಿ ಗೊತ್ತಾಗುತ್ತದೆ ಎಂದು ಆಧಾರಕಾರ್ಡ ನಂಬರ ನಮೂದಿಸಿಲ್ಲ ಅಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿದಿಯರ ಆಸ್ತಿ ಎತ್ತಿಹಾಕಲು ಖೊಟ್ಟಿ ನಿ.ಆರ್.1 ನ್ನು ತಯಾರಿಸಲು ಭಾಗಿಯಾಗಿ, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಪಕ್ಷಗಾರರಿಗೆ ಮೃತ್ಯುಪತ್ರದ ಬಗ್ಗೆ ಮಾಹಿತಿ ಇಲ್ಲ ಅಂದರೆ ನನಗೆ

ಗೊತ್ತಿಲ್ಲ. ಪ್ರಸ್ತುತ ಪ್ರಕರಣದ ಪಕ್ಷಗಾರರಿಗೆ ಗೊತ್ತಾಗದಂತೆ ಮೃತ್ಯುಪತ್ರವನ್ನು ಮುಧೋಳ ನ್ಯಾಯಾಲಯದಲ್ಲಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.03.16 12:18:38 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ

R.A.No.59/2011
R.W.3.

**ಸಾಕ್ಷಿಯನ್ನು ದಿಃ 13.03.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ ಜಿ ಕೆ ಎಂ ವಕೀಲರಿಂದ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ನಾನು ಮೂಲವಾದಿ ಭಾಗೀರಿಥಿ ಬಾಯಿಯವರ ದೂರದ ಸಂಬಂಧಿ ಎಂದು ಬರೆಸಿದ್ದೇನೆ ಅಂದರೆ ಸರಿ. ಬೆರಳಚ್ಚು ತಪ್ಪಿನಿಂದ defendant ಬದಲು Plaintiff ಎಂದು ಬರೆಯಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ನನಗೆ ಮೃತ್ಯುಪತ್ರ ಬರೆಯಲು ಭಾಗೀರಥಿಯವರು ಕರೆದಿದ್ದರು. ನಾನು ಟೈಪಿಂಗ್ ಪರೀಕ್ಷೆ ಪಾಸ್ ಆಗಿರುವುದಿಲ್ಲ. ನಿ.ಆರ್.1 ನ್ನು ಬೇರೆಯವರ ಕಡೆಯಿಂದ ಟೈಪ್ ಮಾಡಿಸಿದ್ದೇನೆ. ಭಾಗೀರಥಿ ರವರು ಹೇಳಿದ್ದನ್ನು ಕೈಬರಹದಲ್ಲಿ ಬರೆದು, ಅದನ್ನು ಕಂಪ್ಯೂಟರ ಸೆಂಟರನಲ್ಲಿ ಒಯ್ದು ಟೈಪ್ ಮಾಡಿಸಿ, ಪ್ರಿಂಟ್ ತೆಗೆದು ಮತ್ತೇ ತಂದು ಭಾಗೀರಥಿ ರವರ ಮನೆಯಲ್ಲಿ ಓದಿ ಹೇಳಿರುತ್ತೇನೆ. ಕೈಬರವಣಿಗೆಯ ಕರಡನ್ನು ಇಟ್ಟುಕೊಂಡಿಲ್ಲ. ಕೈಬರಹದ ಕರಡಿನಲ್ಲಿದ್ದ ಅಂಶಗಳನ್ನು ಸಹ ಭಾಗೀರಥಿರವರಿಗೆ ಓದಿ ಹೇಳಿದ್ದೇನೆ. ಕೈಬರಹದ ಕರಡಿಗೆ ಯಾರ ಸಹಿಯೂ ಪಡೆದಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಕೈಬರಹದಲ್ಲಿ ಕರಡನ್ನು ತಯಾರಿಸಿ, ಅದನ್ನು ಕಂಪ್ಯೂಟರ ಸೆಂಟರಿನಲ್ಲಿ ಟೈಪ್ ಮಾಡಿಸಿ ಪ್ರಿಂಟ್ ತೆಗೆದಿದ್ದೇನೆ ಎಂದು ಬರೆದಿಲ್ಲ.

2. ನಿ.ಆರ್.1 ನ್ನು ಬರೆಸಿದವರ ಹೆಬ್ಬೆಟ್ಟಿನ ಗುರುತನ್ನು ನಾನೇ ಗುರುತಿಸಿದ್ದೇನೆ. ನಿ.ಆರ್.1 ರಲ್ಲಿ ನಾನು ಹಬ್ಬೆಟ್ಟನ್ನು ಗುರುತಿಸಿದ ಬಗ್ಗೆ ಎಲ್ಲಿಯೂ ನಾನು ಸಹಿ ಮಾಡಿಲ್ಲ ಅಂದರೆ ಸರಿ. ಆದರೆ ಆ ಹೆಬ್ಬೆಟ್ಟಿನ ಗುರುತು ಇಂತಹವರದೇ ಎಂದು ನಾನು ಬರೆದಿದ್ದೇನೆ. ಹೆಬ್ಬೆಟ್ಟಿನ ಗುರುತು ಗುರುತಿಸಬೇಕಾದರೆ ಆಧಾರಕಾರ್ಡ ಇರುತ್ತದೆ ಅಂದರೆ ಸರಿಯಲ್ಲ. ಆಧಾರಕಾರ್ಡ ಸಂಖ್ಯೆ ವಿಲ್ ನಲ್ಲಿ ಬರೆದಿಲ್ಲ, ಕಾರಣ ಆಧಾರ ಅವಶ್ಯಕ ದಾಖಲೆ ಅಲ್ಲ.

3. ವಿಲ್ ಬರೆಯಲು ನಾವೆಲ್ಲ ಭಾಗೀರಥಿ ರವರ ಮನೆಗೆ ಬೇರೆ ಬೇರೆ ಹೋಗಿದ್ದೆವು. ನಾನು ಭಾಗೀರಥಿ ರವರ ಮನೆಗೆ ಹೋದಾಗ ಅಲ್ಲಿ ಯಾದವಾಡ, ಕೋಣಪ್ಪನವರ, ಎಸ್ ಎಂ ಘಾಟಗೆ ರವರು ಸ್ಥಳದಲ್ಲಿ ಇದ್ದರು. ನಾನು ಹೋದನಂತರ ಸ್ಥಳಕ್ಕೆ ಆರ್.ಐ.ಪಾಟೀಲ ಬಂದರು. ಭಾಗೀರಥಿರವರ ಕುಟುಂಬದವರು ಮನೆಯಲ್ಲಿ ಇದ್ದರು, ಅಂದರೆ ವೆಂಕಪ್ಪ, ವೆಂಕಪ್ಪನ ಹೆಂಡತಿ, ವೆಂಕಪ್ಪನ ತಾಯಿ ಇಂದ್ರಾಬಾಯಿ ಇದ್ದರು. ವೆಂಕಪ್ಪ ಅಂದರೆ ಹಣಮಂತನ ತಂದೆ. ಹಣಮಂತ ಶಾಲೆಗೆ ಹೋಗಿದ್ದ. ನಾನು ವಿಲ್ ಬರೆಯುವಾಗ 10.30 ರಿಂದ 11 ಗಂಟೆ ಆಗಿತ್ತು. ದಿನ ಯಾವುದು ಎಂದು ನನಗೆ ಗೊತ್ತಿಲ್ಲ, ಆದರೆ ತಾರೀಖು ಗೊತ್ತು.

4. ವಿಲ್ ಬಗ್ಗೆ ಮುಧೋಳ ನ್ಯಾಯಾಲಯದಲ್ಲೂ ಸಾಕ್ಷಿ ಹೇಳಿದ್ದೇನೆ. ಮುಧೋಳ ನ್ಯಾಯಾಲಯದಲ್ಲಿ ಹಣಮಂತ ಮೈನರ ಆಗಿದ್ದರಿಂದ ವೆಂಕಪ್ಪ ಸಾಕ್ಷಿ ನುಡಿದಿದ್ದಾರೆ. ಮುಧೋಳ ನ್ಯಾಯಾಲಯದಲ್ಲಿನ ಸಾಕ್ಷಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕ 07.06.2013 ರಂದು ತನ್ನ ಸಮಕ್ಷಮ ವಿಲ್ ಬರೆಯಲಾಗಿದೆ ಎಂದು ವೆಂಕಪ್ಪ ಹಣಮಂತ ತುಂಗಳ ರವರು ಮುಧೋಳ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ನಲ್ಲಿ ಬಬಲಾದಿ ಗ್ರಾಮದ ಜಮೀನಿನ ಬಗ್ಗೆ, ಬಿದರಿ ಗ್ರಾಮದಲ್ಲಿರುವ ಎರಡು ಮನೆ ಹಾಗೂ ಮುಧೋಳ ನ್ಯಾಯಾಲಯದಲ್ಲಿ ಇರುವ ಹಣದ ವ್ಯವಹಾರದ ಬಗ್ಗೆ ವಿಲ್‌ನಲ್ಲಿ ಬರೆಯಲಾಗಿದೆ. ಅವುಗಳನ್ನು ಹೊರತುಪಡಿಸಿ ಇನ್ನೇನಾದರೂ ತನ್ನ ಹಕ್ಕುಗಳಿದ್ದರೆ, ಅವುಗಳೆಲ್ಲಾ ಹಣಮಂತನಿಗೆ ಹೋಗಬೇಕು ಎಂದು ವಿಲ್ ನಲ್ಲಿ ಬರೆದಿದ್ದಾರೆ. ಪ್ರಸ್ತುತ ಪ್ರಕರಣದ ಬಗ್ಗೆ ಸದರಿ ವಿಲ್ ನಲ್ಲಿ ನಮೂದಿಸಿಲ್ಲ.

ಮುಧೋಳ ನ್ಯಾಯಾಲಯದ ಪ್ರಕರಣದಲ್ಲಿ ಪ್ರಸ್ತುತ ಪ್ರಕರಣದ ಪಕ್ಷಗಾರರು ಪಕ್ಷಗಾರರಾಗಿ ಇಲ್ಲ. ಪ್ರಸ್ತುತ ಪ್ರಕರಣದ ಪಕ್ಷಗಾರರಿಗೆ ಆಸ್ತಿ ಹೋಗುತ್ತದೆ ಎಂದು ನಾವೆಲ್ಲಾ ಸೇರಿ, ಖೊಟ್ಟಿ ಮೃತ್ಯುಪತ್ರ ನಿ.ಆರ್.1 ನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಭಾಗೀರಥಿ ರವರ ಆಧಾರ ಸಂಖ್ಯೆ ಬರೆದರೆ, ವಿಲ್

ಮೇಲಿನ ಹೆಬ್ಬೆಟ್ಟು ಖೊಟ್ಟಿಯಾಗಿದೆ ಎನ್ನುವುದು ಗೊತ್ತಾಗುತ್ತದೆ ಎನುನವ ಕಾರಣಕ್ಕೆ ವಿಲ್ ನಲ್ಲಿ ಭಾಗೀರಥಿರವರ ಆಧಾರಸಂಖ್ಯೆ ಬರೆದಿಲ್ಲ ಅಂದರೆ ಸರಿಯಲ್ಲ. ಭಾಗೀರಥಿ ರವರು ನನಗೆ ಯಾವುದೇ ವಿಲ್ ಮಾಡಲು ಮಾಹಿತಿ ನೀಡಿಲ್ಲ ಹಾಗೂ ನನ್ನ ಕಡೆಯಿಂದ ಯಾವುದೇ ವಿಲ್ ಬರೆಸಿಲ್ಲ ಅಂದರೆ ಸರಿಯಲ್ಲ. ವಿಲ್ ಬರೆದ ಬಗ್ಗೆ ವಿಡಿಯೋ ರಿಕಾರ್ಡಿಂಗ ಮಾಡಿಲ್ಲ ಮತ್ತು ಫೋಟೋ ತೆಗೆದಿಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED

Digitally signed by MAHAMED IMTHIYAZ AHAMED
Date: 2026.03.16 12:18:46 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ